ಅಂಗಡಿ ಎಂದು ಕರೆಯಲಾಗುತ್ತಿದ್ದ ಅದು ಊರಿನ ಮಧ್ಯದಲ್ಲಿ ಅವನ ಮನೆಯಲ್ಲೇ ಇತ್ತು. ಅವನು ಆ ಊರನ್ನು ಹಾದುಹೋಗುತ್ತಿದ್ದ ಪ್ರಯಾಣಿಕರಿಗೆ ಮಾರುವುದಕ್ಕಾಗಿ ಒಂದಿಷ್ಟು ಅಕ್ಕಿ, ಉಪ್ಪು, ಬೇಳೆ, ಎಣ್ಣೆ ಇರಿಸಿಕೊಂಡಿದ್ದ.

ಹರಿ ಪಾತ್ರೆಯನ್ನು ಹಿಡಿದುಕೊಂಡು ಬಂದ ಮುದುಕಿಯನ್ನು ನೋಡಿದ. ಯಾಕೆ ಬಂದಿದ್ದಾಳೆಂದು ತಕ್ಷಣ ಅರ್ಥವಾದರೂ ಆಕೆಯೇ ಮಾತಾಡಲೆಂದು ಸುಮ್ಮನಿದ್ದ. ಆಮೇಲೆ ಆ ಪಾತ್ರೆಯನ್ನು ಹಿಂದೆ ಮುಂದೆ ತಿರುಗಿಸಿ ತಿರುಗಿಸಿ ನೋಡಿ ಪರೀಕ್ಷಿಸಿದ. ಅದನ್ನು ಆಕೆಗೆ ಹಿಂತಿರುಗಿಸುತ್ತಾ, 'ಅಕ್ಕಿ ಇಲ್ಲ. ಇಂಥ ಪಾತ್ರೆಗೆ ಯಾರೇನು ಕೊಡ್ತಾರೆ?' ಎಂದ. ಅವನಲ್ಲಿ ಅಕ್ಕಿಯೂ ಇತ್ತು, ಅದನ್ನು ಮಾರುವ ಇರಾದೆಯೂ ಇತ್ತು. ಆದರೆ, ಆ ಕಂಚಿನ ಪಾತ್ರೆಯನ್ನು ಎಷ್ಟು ಕಮ್ಮಿಗೆ ಸಾಧ್ಯವೋ ಅಷ್ಟು ಕಮ್ಮಿಗೆ ತೆಗೆದುಕೊಳ್ಳಬೇಕೆಂಬ ಆಸೆ. ಅಕ್ಕಿ ಸಿಕ್ಕದಿದ್ದರೆ ಅವಳೇನು ಮಾಡಿಯಾಳು, ರೇವತಿಗೇನು ಮಾಡಿ ಹಾಕಿಯಾಳು, ಹುಡುಗಿ ಹೇಗೆ ಚೇತರಿಸಿಕೊಂಡಾಳು? ಮುದುಕಿ ಅಂಗಡಿಯವನ ಕಡೆ ಬೇಳಾಡುವಂತೆ ನೋಡುತ್ತ, ಮಾತಿಲ್ಲದೆ ನಿರಾಶೆಯಿಂದ ಅಲ್ಲೇ ಒಂದು ಕಟ್ಟೆಗೆಯ ಹಾಗೆ ಗಂಟೆಗಟ್ಟಲೆ ಕುಳಿತಿದ್ದಳು.

ಹಗಲು ಮುಗಿಯತೊಡಗಿತ್ತು. ಹುಷಾರಿಲ್ಲದ ಹುಡುಗಿಯೊಬ್ಬಳನ್ನೇ ಮನೆಯಲ್ಲಿ ಬಿಟ್ಟುಬಂದಿದ್ದೇನೆಂದು ಅರಿವಾದದ್ದೇ ಅವಳಿಗೆ ಭಯವಾಗತೊಡಗಿತು. ಆ ಪಾತ್ರೆಯನ್ನು ಎತ್ತಿಕೊಂಡವಳೇ, 'ಮನೆಗೆ ಹೋಗಬೇಕು. ಆ ಹುಡುಗಿಗೆ ಏನಾಗಿದೆಯೋ ದೇವರಿಗೇ ಗೊತ್ತು' ಎಂದು ತನ್ನಲ್ಲೇ ವಟಗುಟ್ಟಿಕೊಂಡಳು.

'ಸ್ವಲ್ಪ ತಾಳು. ಆ ಪಾತ್ರೆ ಕೊಡಿಲ್ಲಿ. ಏನಾದರೂ ಇದೆಯಾ ನೋಡ್ತೀನಿ' ಎಂದ ಹರಿ, ಒಲ್ಲದ ಮನಸ್ಸಿನಿಂದ. ಆಮೇಲೆ ಅವಳಿಗೆ ನಾಲ್ಕು ಪಾವು ಅಕ್ಕಿ, ಅರ್ಧ ಪಾವು ಬೇಳೆ, ಒಂದು ಹಿಡಿ ಉಪ್ಪು ಕೊಟ್ಟ. ಮುದುಕಿ ತಡವರಿಸುತ್ತ, ನಾಲ್ಕು ಹೆಜ್ಜೆಗೊಮ್ಮೆ ಉಸಿರೆಳೆದುಕೊಳ್ಳುತ್ತ ಮನೆಯತ್ತ ನಡೆದಳು. ಬೆಳಗ್ಗೆಯಿಂದ ಅವಳು ತನ್ನ ಮುಖವನ್ನೂ ತೊಳೆದಿರಲಿಲ್ಲ. ಅವಳ ಮನಸ್ಸು ತೊಳಲಾಡುತ್ತಿತ್ತು.

ರೇವತಿ ಸ್ವಲ್ಪ ಹುಷಾರಾಗಿರಬೇಕೆಂದು ನಿರೀಕ್ಷಿಸುತ್ತ ಮನೆಯನ್ನು ತಲಪಿದಳು. ಹುಡುಗಿಗೆ ಬಾವಿಯಿಂದ ನೀರು ಸೇದು ಅಂತ ಹೇಳಬೇಕೆಂದುಕೊಂಡಳು. ಅನ್ನ ಆಗಲು ತುಂಬ ಹೊತ್ತೇನೂ ಬೇಕಿಲ್ಲ. ಅವಳು ರೇವತೀ ಎಂದು ಒಂದೆರಡು ಸಲವಲ್ಲ, ಮೂರು ಸಲ ಕೂಗಿದಳು. ಏನೂ ಉತ್ತರವಿಲ್ಲ. ಕಡೆಗೆ ಗಂಟಲು ಹರಿಯುವಂತೆ ಜೋರಾಗಿ ಕಿರಿಚಿಕೊಂಡಳು: 'ರೇವತೀ! ರೇವೀ! ಎಲ್ಲಿ ಹೋದೆಯೇ ಹಾಳಾದವಳೇ!'

ಈ ಹೊತ್ತಿಗೆ ರೇವತಿ ಇಷ್ಟಿಷ್ಟೇ ಇಷ್ಟಿಷ್ಟೇ ಕುಸಿಯುತ್ತಿದ್ದಳು. ಅತೀವ ನೋವಿನಿಂದ ಆಗಲೇ ದುರ್ಬಲವಾಗಿಹೋಗಿದ್ದ ಅವಳ ಮೈಯಿ ತಣ್ಣಗೆ ಕೊರೆಯುತ್ತಿತ್ತು. ಅವಳಿಗೆ ಎಷ್ಟು ದಾಹವಾಗಿತ್ತೆಂದರೆ ಗಂಟಲೇ ಅವಳ ನಾಲಗೆಯನ್ನು ಹೀರಿಕೊಳ್ಳುತ್ತಿದ್ದಂತಿತ್ತು. ಕೊಠಡಿಯಲ್ಲಿ ಸಹಿಸಲಸಾಧ್ಯವಾದಷ್ಟು ಸೆಕೆಯಾದದ್ದರಿಂದ ಒಳ ಅಂಗಳಕ್ಕೆ ತೆವಳಿಕೊಂಡುಹೋದಳು. ಆದರೂ ಅವಳಿಗೆ ಸಮಾಧಾನವಾಗಲಿಲ್ಲ. ಹಿಂಭಾಗದಲ್ಲಿದ್ದ ವರಾಂಡಾಕ್ಕೆ ಉರುಳಿಕೊಂಡು ಹೋಗಿ ಗೋಡೆಗೊರಗಿಕೊಂಡಳು. ಮುಸ್ಸಂಜೆಯಾಗಿತ್ತು, ತಣ್ಣಗೆ ಗಾಳಿ ಬೀಸುತ್ತಿತ್ತು. ಅವಳ ತಂದೆ ಸಾಯುವ ಮುನ್ನ ನೆಟ್ಟಿದ್ದ ಬಾಳೆ ಗಿಡದಲ್ಲಿ ಒಂದು ಗೊನೆ ತೂಗುತ್ತಿತ್ತು. ಎರಡು ವರ್ಷದ ಹಿಂದೆ ಅವಳ ಅಮ್ಮ ನೆಟ್ಟಿದ್ದ ಪೇರಳೆಮರ ಎತ್ತರಕ್ಕೆ ಬೆಳೆದು ಹೂವುಗಳಿಂದ ತುಂಬಿಹೋಗಿತ್ತು. ರೇವತಿಗೆ ತಾನು ಬಾವಿಯಿಂದ ಸಣ್ಣದೊಂದು ಪಾತ್ರೆಯಲ್ಲಿ ನೀರು ಸೇದಿ ಹೇಗೆಲ್ಲ ಆ ಗಿಡಕ್ಕೆ ನೀರುಣಿಸುತ್ತಿದ್ದೆ ಎಂದು ನೆನಪಾಯಿತು. ಆ ನೆನಪು ಅವಳ ಅಮ್ಮನಿಗೆ ಸಂಬಂಧಿಸಿದ ಅನೇಕ ನೆನಪುಗಳನ್ನು ತಂದಿತು. ತಲೆಯಲ್ಲಿ ಕೋಲಾಹಲ; ಅಸ್ತವ್ಯಸ್ತಗೊಂಡ ಯೋಚನೆಗಳು. ಆದರೂ ಅವಳ ಅಮ್ಮನ ಚಿತ್ರ ಅವಳಿಗೆ ಜೋತುಬಿದ್ದಿತ್ತು.